**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 41/2020**

**ಚಾ.ಸಾ. :- 06**
**ಪ್ರಾ.ಸಾ. :- 02**

| | | |
|---|---|---|
| ಹೆಸರು | : | ಮುನೀರ್ |
| ತಂದೆಯ ಹೆಸರು | : | ನಜೀರ್ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ಗಂಜಾಂ. |

**ಪ್ರಮಾಣೀಕರಿಸಲಾದ ದಿನಾಂಕಃ- 03.11.2025.**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಚಾ.ಸಾ-10 ರವರು ನಮ್ಮ ಮನೆಯ ಹತ್ತಿರ ವಾಸವಿರುತ್ತಾರೆ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸಾಕ್ಷಿಯ ಸಹಿ ಇರುವ ದಾಖಲೆಯು ಮಹಜರ್ ಆಗಿದ್ದು, ಅದನ್ನು ಈಗ ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ರಸ್ತೆ ಅಪಘಾತಕ್ಕೆ ಸಂಬಂಧಿಸಿದಂತೆ ಸದರಿ ಮಹಜರ್ ಗೆ ಸುಮಾರು 5-6 ವರ್ಷಗಳ ಹಿಂದೆ ನಾನು ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ನಾನು ಅಪಘಾತ ಸ್ಥಳವಾದ ಬಸ್ ಸ್ಟಾಂಡ್ ಬಳಿ ಮಾಡಿರುತ್ತೇನೆ. ಚಾ.ಸಾ-10 ರವರು ಸಹ ಮಹಜರಿಗೆ ಸಹಿ ಮಾಡಿರುತ್ತಾರೆ. ಈಗ ನೋಡುತ್ತಿರುವ ಫೋಟೋಗಳಲ್ಲಿರುವ ದ್ವಿಚಕ್ರ ವಾಹನ ಹಾಗೂ ಕಾರನ್ನು ಆ ದಿನ ಪೊಲೀಸರು ಅಮಾನತ್ತುಪಡಿಕೊಂಡಿರುತ್ತಾರೆ. ಸದರಿ ಫೋಟೋಗಳನ್ನು ಈಗ ನಿಪಿ-5 ಮತ್ತು 6 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>**

ಚಾ.ಸಾ-2 ನನ್ನ ಅಳಿಯ. ಚಾ.ಸಾ-1 ಪರಿಚಯ. ಚಾ.ಸಾ-1 ರವರು ಈ ದಿನ ನ್ಯಾಯಾಲಯದಲ್ಲಿರುತ್ತಾರೆ. ಗಂಜಾಂ ಸರ್ಕಲ್ ಬಳಿ ಮಹಜರಿಗೆ ಸಹಿ ಮಾಡಿರುತ್ತೇನೆ. ಮಹಜರಿನಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಹೇಳಿದಂತೆ ನಾನು ವಾಹನಗಳನ್ನು ಸಾಗಿಸುತ್ತೇನೆ ಎಂದರೆ ಸರಿ. ನಾನು ಅನಾಥ ಶವಗಳನ್ನು ಸಾಗಿಸಿ ಅಂತ್ಯ ಕ್ರಿಯೆ ಮಾಡುತ್ತೇನೆ ಎಂದರೆ ಸರಿ. ಸದರಿ ಕಾರು ಬಿಳಿಯ ಬಣ್ಣದಾಗಿದ್ದು, ದ್ವಿಚಕ್ರ ವಾಹನ ನೀಲಿ ಬಣ್ಣದ್ದಾಗಿರುತ್ತದೆ. ವಾಹನಗಳ ನೋಂದಣಿ ಸಂಖ್ಯೆ ಗೊತ್ತಿಲ್ಲ. ಮಹಜರ್ ಮಾಡುವಾಗ ತುಂಬಾ ಜನ ಸೇರಿದ್ದರು. ಸದರಿ ಸರ್ಕಲ್ ಬಳಿ ಗುರುಭವನವಿದ್ದು, ಕಾಂಪೌಂಡ್ ಬಳಿ ಆಟೋ ನಿಲ್ದಾಣವಿರುತ್ತದೆ ಎಂದರೆ ಸರಿ. ಸದರಿ ಕಾಂಪೌಂಡ್ 4 ಅಡಿ ಎತ್ತರವಿರಬಹುದು. ಗಂಜಾಂ ರಸ್ತೆ ಪೂರ್ವ ದಿಕ್ಕಿಗೆ ಇರುತ್ತದೆ. ಬೆಂಗಳೂರಿನಿಂದ ಮೈಸೂರಿಗೆ ಬರುವ ರಸ್ತೆಯಲ್ಲಿ ಗಂಜಾಂಗೆ ಹೋಗಲು ಎಡಭಾಗಕ್ಕೆ ತಿರುಗಿ ಹೋಗಬೇಕೆಂದರೆ ಸರಿ. ಸದರಿ ಕಾಂಪೌಂಡಿನ ಕೊನೆಯ ಭಾಗದಲ್ಲಿ ಬೋರ್ಡ್ ಹಾಕಲು ಪೋಲನ್ನು ಅಳವಡಿಸಿರುತ್ತಾರೆಂದರೆ ಸರಿ. ಸದರಿ ಪೋಲ್ ರಸ್ತೆಯಿಂದ ಸುಮಾರು 4-5 ಅಡಿ ಅಂತರದಲ್ಲಿರುತ್ತದೆ. ನಾನು ಮಹಜರಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲಿ ಏನನ್ನೂ ಅಮಾನತ್ತು ಮಾಡಿಲ್ಲ ಎಂದರೆ ಸರಿಯಲ್ಲ. ಚಾ.ಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ :- ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**